

ಎದುರು ನಿಂತು, ಅಷ್ಟೇನೂ ಆಳವಿಲ್ಲದ ಕೊಳವೊಂದಕ್ಕೆ ಮೂತ್ರ ವಿಸರ್ಜನೆ ಮಾಡುತ್ತಿರುತ್ತವೆ. ಮೂತ್ರ ವಿಸರ್ಜಿಸುತ್ತಿರುವಾಗ, ಎರಡೂ ಕಲಾಕೃತಿಗಳ ಸೊಂಟ ಕುಣಿಯುತ್ತದೆ, ಲಿಂಗ ಮೇಲೆ ಕೆಳಗೆ ಚಲಿಸುತ್ತದೆ ಹಾಗೂ ನೀರಿನಿಂದ ಪ್ರಾಗ್ ನಿವಾಸಿಗಳ ಪ್ರಸಿದ್ಧ ಉಲ್ಲೇಖಗಳನ್ನು ಬರೆಯುತ್ತದೆ. ಆಳವಿಲ್ಲದ ಕೊಳ ಜೆಕ್ ಗಣರಾಜ್ಯದ ಪ್ರತೀಕ ಎನ್ನಲಾಗಿದ್ದು, ಪುರುಷರು ದೇಶದ ಮೇಲೆ ಮೂತ್ರ ವಿಸರ್ಜಿಸುತ್ತಿದ್ದಾರೆ ಎನ್ನುವ ಅರ್ಥವನ್ನು ಶಿಲ್ಪಗಳಿಗೆ ಹಚ್ಚಲಾಗಿದೆ.

ಕಂಪಾ ಐಲ್ಯಾಂಡ್ ಪ್ರಾಗ್ ನಗರದ ಸುಂದರವಾದ ಪ್ರದೇಶಗಳಲ್ಲೊಂದಾಗಿದೆ. ಅಲ್ಲಿಂದ ಕಾಣುವ ನಗರದ ನೋಟ, ಚಾರ್ಲ್ಸ್ ಬ್ರಿಡ್ಜ್ ಪ್ರವಾಸಿಗರ ಗಮನ ಸೆಳೆಯುತ್ತವೆ. ಕಂಪಾ ಪಾರ್ಕ್‌ನಲ್ಲಿರುವ ಕರಿ ಬಣ್ಣದ, ಅಸಹಜ ಗಾತ್ರದ, ತೆವಳುತ್ತಿರುವ ಭಂಗಿಯಲ್ಲಿರುವ ಮಕ್ಕಳ ಶಿಲ್ಪಗಳಿವೆ. ಬಾರ್ ಕೋಡ್‌ನಂತೆ ಕಾಣುವ ಮುಖಗಳು ಗರ್ಭಪಾತವನ್ನು ಪ್ರತಿಭಟಿಸುವುದರ ಸಂಕೇತವಾಗಿವೆ. ಕಂಚಿನಿಂದ ತಯಾರಿಸಲಾದ ಈ ಶಿಲ್ಪಗಳು ಪುಟ್ಟ ಮಕ್ಕಳಿಗೆ ಮನರಂಜನೆಯ ವಸ್ತುಗಳಾಗಿವೆ. ಇಲ್ಲಿಗೆ ಭೇಟಿನೀಡಿದ ಪ್ರವಾಸಿಗರು, ತೆವಳುತ್ತಿರುವ ಭಂಗಿಯಲ್ಲಿರುವ ಮಕ್ಕಳನ್ನು ಕುತೂಹಲದಿಂದ ವೀಕ್ಷಿಸಿ ಫೋಟೊ ತೆಗೆಸಿಕೊಳ್ಳುತ್ತಾರೆ. ತಾಯಂದಿರು ತಮ್ಮ ಮಕ್ಕಳನ್ನು ಶಿಲ್ಪಗಳ ಮೇಲೆ ಕುಳ್ಳಿರಿಸಿ ಆನಂದಿಸುತ್ತಾರೆ. ತೆವಳುತ್ತಿರುವ ಭಂಗಿಯಲ್ಲಿರುವ ಮಕ್ಕಳ ಶಿಲ್ಪಗಳು ಕಮ್ಯುನಿಸ್ಟ್ ಯುಗದ ಹಾಗೂ ನಿರಂಕುಶ ಆಡಳಿತವು ಪ್ರೌಢಾವಸ್ಥೆಯನ್ನು ತಲುಪುವ ಸಾಮರ್ಥ್ಯವನ್ನು ನಿಗ್ರಹಿಸುವುದರ ಸಂಕೇತವಾಗಿದೆ.

ಪ್ರಾಗ್ ನಗರದ ಅತಿ ಎತ್ತರದ ಗೋಪುರವೆಂದೇ ಗುರುತಿಸಲ್ಪಟ್ಟಿರುವ ಶಿಶ್ಕೋವ್ ಟೆಲಿವಿಷನ್ ಟವರ್ ಪ್ರವಾಸಿಗರು ನೋಡಲೇಬೇಕಾದಂತಹ ಅದ್ಭುತ ಟವರ್. ಅಸಾಂಪ್ರದಾಯಿಕ ಆಕಾರವುಳ್ಳ ಈ ಗೋಪುರದ ಮೇಲೆ ತೆವಳಿಕೊಂಡು ಹೋಗುತ್ತಿರುವ ಹತ್ತು ಮಕ್ಕಳ ಶಿಲ್ಪಗಳಿವೆ.

ಫ್ಯುಟುರಾ ಆರ್ಟ್ ಮ್ಯೂಸಿಯಂ ಹಿಂಭಾಗದ ತೋಟದಲ್ಲಿರುವ ‘ಬ್ರೌನ್ ನೋಸರ್ಸ್’ ಹೆಸರಿನ ಶಿಲ್ಪಗಳು ನೋಡುಗರಲ್ಲಿ ನಗೆಯುಕ್ಕಿಸುತ್ತವೆ. 17 ಅಡಿ ಎತ್ತರವಿರುವ ಬೃಹದಾಕಾರದ ಈ ಶಿಲ್ಪಗಳನ್ನು ಗೋಡೆಯ ಕಡೆ ಮುಖಮಾಡಿ ಬಗ್ಗಿರುವಂತೆ ರಚಿಸಲಾಗಿದೆ. ಅವುಗಳ ಪೃಷ್ಟದ ಮೇಲೆ ಏಣಿಯನ್ನಿಡಲಾಗಿದೆ. ವೀಕ್ಷಕರು ಏಣಿಯ ಮೂಲಕ ಹತ್ತಿ ಶಿಲ್ಪದ ಗುದದ್ವಾರದಲ್ಲಿ ತಲೆಯನ್ನು ತೂರಿಸಿ ನೋಡಿದರೆ, ಜೆಕ್ ಗಣರಾಜ್ಯದ ಮಾಜಿ ಅಧ್ಯಕ್ಷ ಮತ್ತು ನ್ಯಾಷನಲ್ ಗ್ಯಾಲರಿಯ ಮುಖ್ಯಸ್ಥರು ಪರಸ್ಪರ ಚಮಚದಿಂದ ಆಹಾರ ತಿನ್ನಿಸುತ್ತಿರುವ ವಿಡಿಯೊ ನೋಡಬಹುದು. ಹಿನ್ನೆಲೆಯಲ್ಲಿ ‘ವಿ ಆರ್ ಚಾಂಪಿಯನ್ಸ್’ ಎಂಬ ಮಾತುಗಳು ಕೇಳಿಬರುತ್ತವೆ. ಈ ಶಿಲ್ಪಗಳು ರಾಜಕಾರಣಿಗಳ ಅಹಂಕಾರಕ್ಕೆ ಪೆಟ್ಟುಕೊಟ್ಟಂತಿವೆ.



ಸಂತನ ನಿಷ್ಪ್ರಯೋಜಕತೆಯನ್ನು ಸಂಕೇತಿಸುವ ಸತ್ತ ಕುದುರೆಯ ರೂಪಕ

ನಿಷ್ಪ್ರಯೋಜಕನನ್ನು ಸತ್ತ ಕುದುರೆಗೆ ಹೋಲಿಸುತ್ತೇವಷ್ಟೇ. ಅದೇರೀತಿ, ವೆನ್ಸೆಸ್ಲಾಸ್ ಚೌಕದ ‘ಪಲಾಕ್ ಲುಸೆರ್ನಾ’ದಲ್ಲಿ ತಲೆಕೆಳಗಾಗಿ ನೇತಾಡುತ್ತಿರುವ ಸತ್ತ ಕುದುರೆಯೊಂದರ ಮೇಲೆ, ಸಂತ ವೆನ್ಸೆಸ್ಲಾಸ್ ಸವಾರಿ ಮಾಡುತ್ತಿರುವ ಶಿಲ್ಪವಿದೆ. ಕಷ್ಟದಲ್ಲಿರುವವರಿಗೆ ವೆನ್ಸೆಸ್ಲಾಸ್ ಬಂದು ಸಹಾಯ ಮಾಡುತ್ತಾರೆಂದು ಹೇಳುತ್ತಾರಾದರೂ, ಇದುವರೆಗೂ ಅವರು ಬಂದು ಯಾರಿಗೂ ಸಹಾಯ ಮಾಡಿದ್ದಿಲ್ಲ. ಅರ್ಥಾತ್ ಆತ ಯಾವುದಕ್ಕೂ ಪ್ರಯೋಜನಕ್ಕೆ ಬಾರದ ಸತ್ತ ಕುದುರೆಯಂತೆ ಎನ್ನುವುದನ್ನು ಶಿಲ್ಪ ಸೂಚಿಸುತ್ತದೆ.

ಇಪ್ಪತ್ತನೇ ಶತಮಾನದ ಜರ್ಮನ್ ಲೇಖಕ ಫ್ರಾಂಜ್ ಕಾಫ್ಕಾ ಒಬ್ಬ ವಿಶಿಷ್ಟ ಬರಹಗಾರ. ಕಾಫ್ಕಾನ ಸ್ಮರಣಾರ್ಥ ‘ಕ್ವಾಡ್ರಿಯೋ ಶಾಪಿಂಗ್ ಸೆಂಟರ್’ನ ಮಧ್ಯಭಾಗದಲ್ಲಿ ಸ್ಥಾಪಿಲಾಗಿರುವ ಅದ್ಭುತ ಕಲಾಕೃತಿ ‘ಹೆಡ್ ಆಫ್ ಫ್ರಾಂಜ್ ಕಾಫ್ಕಾ’. ಪ್ರತ್ಯೇಕವಾಗಿ ತಿರುಗುವ 42 ಸ್ಟೀಲ್ ಫಲಕಗಳನ್ನು ಹೊಂದಿರುವ ಈ ಶಿಲ್ಪದ ಪ್ರತಿಯೊಂದು ಫಲಕವೂ ಯಾಂತ್ರಿಕೃತವಾಗಿದ್ದು, ದಿನದ 24 ಗಂಟೆಗಳೂ ಕಾರ್ಯನಿರ್ವಹಿಸುತ್ತದೆ. ಒಮ್ಮೆ ಒಂದು ದಿಕ್ಕಿಗೆ ಮುಖವನ್ನು ತಿರುಗಿಸಿ, ಸ್ವಲ್ಪ ಸಮಯದ ನಂತರ ಮತ್ತೆ ಇನ್ನೊಂದು ದಿಕ್ಕಿಗೆ ಚಲನೆ ಪ್ರಾರಂಭಿಸುತ್ತದೆ. ಹೀಗೆ ನಿರಂತರವಾಗಿ ನಾಲಕ್ಕೂ ದಿಕ್ಕುಗಳಿಗೆ ಮುಖಮಾಡಿ ನಿಲ್ಲುವಂತೆ ತಿರುಗುವ ಈ ಶಿಲ್ಪ 11 ಮೀಟರ್ ಎತ್ತರವಿದ್ದು, ಪ್ರಾಗ್‌ನ ಪ್ರಮುಖ ಆಕರ್ಷಣೆಗಳಲ್ಲಿ ಒಂದಾಗಿದೆ.

ಪ್ರತಿಕ್ರಿಯಿಸಿ: feedback@sudha.co.in


ವಶೀಕರಣ ಸ್ಪೆಷಲಿಸ್ಟ್



ಶ್ರೀರಾಘವೇಂದ್ರಸ್ವಾಮಿ ಜ್ಯೋತಿಷ್ಯಾಲಯ
ಗುರೂಜಿ ಮಹೇಶ್‌ಭಟ್

ಇಲ್ಲಿದೆ ದೇವಿ ಅಘೋರಿ ಶಕ್ತಿಗಳ ಭಂಡಾರ, ದುಷ್ಟ ಅಘೋಚರ ಶಕ್ತಿಗಳು ಆಡಿಸುವ ಆಟದಿಂದ ಮನುಷ್ಯನು ತಾನು ಬಯಸಿದಂತೆ ಸುಖ ಜೀವನವನನ್ನು ಸಾಗಿಸಲು ಸಿದ್ಧಿಸಾಧಕರ ಸಹಕಾರ, ನಿಮ್ಮ ಜೀವನಕ್ಕೆ ಪ್ರಮುಖವಾದದ್ದು, ಅಂತಹ ಸಿದ್ಧಿಸಾಧಕರಾದ
“ಗುರೂಜಿ ಮಹೇಶ್‌ಭಟ್”
ಇವರಿಂದ ಮಾತ್ರ ಈ ಸಾಧನೆ ಸಾಧ್ಯ

ಇವರು ಕೇರಳ ಬಂಗಾಳಿ, ಅಘೋರಿ, ನಾಗಸಾಧುಗಳ ಋಷಿಮುನಿಗಳ ಬಳಿ ಪ್ರಾಚೀನ ತಾಳೆಗ್ರಂಥದ ರಹಸ್ಯ, ಮಂತ್ರ-ತಂತ್ರ ದೇವಿಶಕ್ತಿ ಕಠೋರ ಸಾಧನೆಯಿಂದ ಯಾಗ ಯಜ್ಞಗಳ ಮೂಲಕ ಸಿದ್ಧಿ ಮಾಡಿಕೊಂಡಿರುತ್ತಾರೆ.

ವಿದ್ಯೆ, ಉದ್ಯೋಗ, ಶತ್ರುಭಯ, ಪ್ರೇಮವಿಚಾರ, ವಿವಾಹ, ಸಂತಾನ, ಮಾಟಮಂತ್ರ, ಶತ್ರುನಾಶ, ಲೈಂಗಿಕ, ಸಂಮ್ಮೋಹಿನಿ, ಜಾಗದ ವಿಚಾರ, ಬಿಸಿನೆಸ್, ವಿದೇಶ ಪ್ರಯಾಣ, ಸಾಲಭಾದೆ, ಕೋರ್ಟ್‌ಕೇಸ್, ಗುಪ್ತಸಮಸ್ಯೆ, ಇನ್ನಿತರ ಯಾವುದೇ ಕಠಿಣ ಸಮಸ್ಯೆಯಿರಲಿ ಸಿದ್ಧಿಸಾಧನೆಯಿಂದ ಶಾಸ್ತ್ರೀಯ ಪದ್ಧತಿಯಲ್ಲಿ
ಕೆಲವೇ ಗಂಟೆಗಳಲ್ಲಿ ಪರಿಹಾರ ಮಾಡುತ್ತಾರೆ.

ವಿಶೇಷ ಸೂಚನೆ: ಜನವಶೀಕರಣ, ಲಕ್ಷ್ಮೀವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರುವಶೀಕರಣಗಳಿಗೆ ಕೆಲವೇ ಗಂಟೆಗಳಲ್ಲಿ ಪರಿಹಾರ.

ನಮ್ಮನ್ನು ಭೇಟಿಯಾಗುವ ಅವಶ್ಯಕತೆಯಿಲ್ಲ ಒಮ್ಮೆ ಕರೆಮಾಡಿ ನಿಮ್ಮೆಲ್ಲ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಪಡೆಯಿರಿ.
ನಮ್ಮಲ್ಲಿ ಕೇಳುವ ನಿಮ್ಮೆಲ್ಲ ವಿಷಯಗಳನ್ನು ಗುಪ್ತವಾಗಿಡಲಾಗುವುದು.

ನಿಮ್ಮ ಸಮಸ್ಯೆಗಳನ್ನು ಯಾರಿಂದಲೂ ಬಗೆಹರಿಸಲು ಸಾಧ್ಯವಿಲ್ಲ, ನಮ್ಮಿಂದ ಮಾತ್ರಸಾಧ್ಯ ಪರಿಹಾರ ಬೇಕಿದ್ದಲ್ಲಿ ಒಮ್ಮೆ ಕರೆಮಾಡಿ

ಗುರೂಜಿ ಮಹೇಶ್‌ಭಟ್
9686999517